ಶ್ರೀ ಎಂ. ಎಸ್. ನಾಗನೂರ್.—ಹಾಗಾದರೆ ಆ ಕೆಲಸವನ್ನೂ ಸಹ ಜಾಗ್ರತೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಚಾನರ್ ಕೆಲಸ ನಡೆಯುತ್ತಿದೆ. ಮತ್ತು ಜಾಗ್ರತೆಯಾಗಿ ಮುಗಿಸಬೇಕೆಂದೂ ಸಹ ಇದ್ದೇವೆ.

Villages of former Bombay State merged in this State.

*Q —1099. Sri N. O. SAMAJI (Belgaum-II).—

Will the Government be pleased to state :—

(*a*) the number of villages of former Bombay State merged in this State ;

(*b*) the amount of land revenue surcharge collected in this area ;

(*c*) whether surcharge from the merged districts was not recovered and if so, why ?

A.— Sri M. V. KRISHNAPPA (Minister for Revenue).—

(*a*) 1,712

(*b*) Rs. 20,72,111-57 nP.

(*c*) Not recovered in 81 villages since the rate of assessment in these villages is higher than the rate of assessment *plus* surcharge prevailing in the union villages and since no surcharge is consequently leviable in such cases under Section 3 (2) of the Mysore Land Revenue (Surcharge) Act.

Sri N. O. SAMAJI.—(Marathi)

†ಶ್ರೀ ಎಂ. ವಿ. ಕೃಷ್ಣಪ್ಪ.—ಬೊಂಬಾಯಿ ಕರ್ನಾಟಕದಲ್ಲಿ ಎಕ್ಸ್ ಜಮೀನ್ದಾರಿಗಳು ಮತ್ತು ಎಕ್ಸ್-ಏಲೇಜಸ್ ಎಲ್ಲಾ ಸೇರಿಕೊಂಡು ಮರ್ಜ್ ಆಗಿರುವುದು ಒಟ್ಟು 1712 ಹಳ್ಳಿಗಳು. ಆಗಿನ ಕಾಲದಲ್ಲಿ ಅದರಲ್ಲೂ ಬ್ರಿಟಿಷರ ಆಳ್ವಿಕೆಯಲ್ಲಿ ಹಿಂದೆ ಅಲ್ಲಿನ ಜಮೀನ್ದಾರರು ಮತ್ತು ರಾಜಮಹಾರಾಜರುಗಳು ಹೆಚ್ಚು ಕಂದಾಯವನ್ನು ಕೊಡುತ್ತಿದ್ದರು. ಆದ್ದರಿಂದ ಸರ್‌ಚಾರ್ಜ್ ಹಾಕುತ್ತೇವೆಂದು ಯಾವಾಗ ಹೇಳಲಿ ಅವರು ಆಗ ಆ ಕರವನ್ನು ಕೊಡುತ್ತಿದ್ದರು. ಕೆಲವರು ಈಗಿನ ಸರ್‌ಚಾರ್ಜ್ ಹಿಂದಿನಕಂದಾಯ ಎರಡೂ ಸೇರಿಕೊಂಡರೆ ಹಿಂದೆ ಕೊಡುತ್ತಿದ್ದುದಕ್ಕಿಂತಲೂ ಈಗ ಜಾಸ್ತಿ ಕೊಡುತ್ತಿದ್ದಾರೆ. ಆದ್ದರಿಂದ ಅಂತಹವರಿಗೆ ಈ ಸರ್‌ಚಾರ್ಜನ್ನು ವಿಧಿಸುವುದಿಲ್ಲ. ಎರಡೂ ಸೇರಿಸಿಕೊಂಡಾಗ ಎಲ್ಲಿ ಕಡಿಮೆ ಕಂದಾಯ ವಸೂಲಾಗುತ್ತದೋ ಅಂಥಾದ್ದಕ್ಕೆ ಸರ್‌ಚಾರ್ಜ್ ಹಾಕಿದ್ದೇವೆ.

ಶ್ರೀ ಸಿದ್ದಯ್ಯ ಕಾಶೀಮಠ್.—81 ಗ್ರಾಮಗಳಲ್ಲಿ ಸರ್‌ಚಾರ್ಜನ್ನು ವಸೂಲು ಮಾಡಲಲ್ಲವೆಂದು ಹೇಳುತ್ತೀರಿ. ಹಾಗಾದರೆ ಮೊನ್ನೆ ಈ ಬಗ್ಗೆ ತಿದ್ದುಪಡಿ ತಂದ ಪ್ರಕಾರ ಎಷ್ಟು ಗ್ರಾಮಗಳಿಗೆ ಈ ರಿಯಾಯಿತಿ ಸಿಕ್ಕಬಹುದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಸರ್‌ಚಾರ್ಜ್ ವಸೂಲಿ ಕಾಲದಲ್ಲಿ ಆ ಲೆಕ್ಕವನ್ನು ಎತ್ತಿ ಹೇಳಬಹುದು.

Sri N. O. SAMAJI.—(Marathi)

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ಹೇಳುವುದಕ್ಕಾಗುವುದಿಲ್ಲ. ಬೆಳಗಾಂ ಜಿಲ್ಲೆಯಲ್ಲಿ 49 ಹಳ್ಳಿಗಳಿವೆ. ಬಿಜಾಪುರದಲ್ಲಿ 161 ಹಳ್ಳಿಗಳಿವೆ. ಧಾರವಾಡ ಜಿಲ್ಲೆಯಲ್ಲಿ 168 ಹಳ್ಳಿಗಳಿವೆ. ಹೀಗೆ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿ ಇದೆ.

Sri N. O. SAMAJI.—(Marathi)

ಶ್ರೀ ಎಂ. ವಿ. ಕೃಷ್ಣಪ್ಪ.—ಇದುವರೆಗೂ ಆಗಿರುವ ರೂಲ್ಸ್‌ನಲ್ಲಿ ಈ ಸರ್‌ಚಾರ್ಜನ್ನು ಅನ್-ಕಾನ್ಸ್‌ಟ್ಯೂಷನಲ್ ಎಂದು ಡಿಕ್ಲೇರ್ ಮಾಡಲಲ್ಲ. ಮಾನ್ಯಸದಸ್ಯರು ಹೇಳಿದಹಾಗೆ ಕೆಲವು ಇರಬೇಕು.